ಅದನ್ನು ನೀವು ಒಳಗಿಟ್ಟುಕೊಳ್ಳಬಹುದು. ಆಗ ಅದು ನೀವು ಹೇಳಿದ್ದನ್ನು ಮತ್ತೆ ಹೇಳುತ್ತದೆ, ನೀವು ಕಲಿಸಿದ್ದನ್ನು ಕಲಿಯುತ್ತದೆ. ಮನೆಗೆ ಕಳೆ ಬರುತ್ತದೆ. ಅದು ನಿಮ್ಮೊಂದಿಗೆ ಜಗಳವಾಡುವುದಿಲ್ಲ. ಅದಕ್ಕಾಗಿ ನನಗೆ ಗಿಳಿಯ ಅಗತ್ಯವಿದೆ".

"ಕೈಟಿ, ನಿಮಗೆ ಗಿಳಿಯ ಬಗ್ಗೆ ಅಷ್ಟು ಆಸಕ್ತಿಯಿದ್ದರೆ ಯಾವುದಾದರೂ 'ಪೆಟ್ ಸೆಂಟರ್'ನಿಂದ ಖರೀದಿಸಿ ತೆಗೆದುಕೊಂಡು ಬನ್ನಿ."

"ಅಲ್ಲ, ನೀನೆಂಥ ಮನುಷ್ಯ? ನಿನಗೆ ಖರೀದಿಸಿದ ಮತ್ತು ನಾವೇ ಹಿಡಿದ ಗಿಳಿಗಳಲ್ಲಿರುವ ವ್ಯತ್ಯಾಸ ಸಹ ಗೊತ್ತಿಲ್ಲ. ಗಿಳಿಯನ್ನು ಯಾವ ಹೆಂಗಸಾದರೂ ಕೊಳ್ಳಬಲ್ಲಳು. ಆದರೆ, ಗಿಳಿಯನ್ನು ನಾವೇ ಹಿಡಿಯುವುದರಲ್ಲಿ ಮಜವಿದೆ."

"ಸರಿ! ನಿಮ್ಮ ಈ ಅನಿಸಿಕೆ ನಿಮ್ಮದು ಮಾತ್ರ." ಎಂದಿದ್ದೆ ನಾನು.

"ನೀನು ನನ್ನ ಗಿಳಿಯಾಗಲು ಸಾಧ್ಯವೇ?"

"ಗಿಳಿ, ನಾನು ಗಿಳಿ!" ನಾನು ಕಷ್ಟದಿಂದ ನಗುವನ್ನು ತಡೆದುಕೊಂಡೆ, "ನಾನು ನನ್ನ ಸ್ನೇಹಿತೆಗೆ ಫೋನ್ ಮಾಡಿ ಕೇಳಲೇ?"

"ನೀನು ಮೂರ್ಖ! ನಾನು ಮೂರ್ಖನಿಗೂ ಲಂಚ್‌ಗೆ ಏರ್ಪಾಟು ಮಾಡಿದ್ದು ನನ್ನ ಔದಾರ್ಯ."

ನನ್ನ ಮನಸ್ಸಿನಲ್ಲಿ ಅವಳ ಬಗ್ಗೆ ಇಲೇನ್ ಹೇಳಿದ ವಿಷಯಗಳು ಗಸ್ತು ತಿರುಗುತ್ತಿದ್ದವು. ಅಲ್ಲದೆ ನನಗಾದ ಅವಮಾನದಿಂದ ನನ್ನಲ್ಲಿ ರೋಷ ಮೂಡುತ್ತಿತ್ತು. ನಾನು ಜೀವಮಾನವಿಡಿ ಅವಳ ಲಂಚ್ ತಿನ್ನಲಾರೆ. ನಾನು ಕುರ್ಚಿಯಿಂದ ಏಳುತ್ತಾ ಹೇಳಿದ್ದೆ, "ನನ್ನ ಹಸಿವು ಸತ್ತಿತು. ಇನ್ನು ನಾನು ಲಂಚ್ ತೆಗೆದುಕೊಳ್ಳಲಾರೆ".

"ಮೈ ಡಿಯರ್ ಪಾಲ್, ನೀನು ಸ್ವಲ್ಪ ಹೊತ್ತು ನಿಲ್ಲು. ಲಂಚ್ ತೆಗೆದುಕೊಳ್ಳಬೇಡ, ನನ್ನ ಜೊತೆಗಾದರೂ ಕೂತಿರು."

ಮೈ ಡಿಯರ್ ಎಂದ ಅನಂತರ ನಾನು ಅಲ್ಲಿಂದ ಹೋಗಲು ಹೇಗೆ ಸಾಧ್ಯ? ನಾನು ಮತ್ತೆ ಕುರ್ಚಿಯಲ್ಲಿ ಕೂತೆ. ಅಷ್ಟರಲ್ಲಿ ಲಂಚ್ ಬಂತು. ಆದರೆ, ನಾನು ಈ ಮೊದಲೇ ಲಂಚ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೆ. ಆದರೆ, ನನ್ನ ಹಸಿವು ಬೇರೆ ತೆರನಾಗಿತ್ತು. ಅವಳ ನಗ್ನ ಬಾಹುಗಳು, ಕಂದು ಬಣ್ಣದ ಕೂದಲುಗಳು, ಆಕರ್ಷಕ ಕಣ್ಣುಗಳು ಮತ್ತು ಕತ್ತಿನ ಕೆಳಗಿದ್ದ ರವಿಕೆಯನ್ನು ಬಿಟ್ಟು ಹೋಗಲು ನನಗೆ ಮನಸ್ಸಿರಲಿಲ್ಲ; ಅಲ್ಲದೆ ನಾನು ಅವಳ ಗಿಳಿಯಾಗಲೂ ಬಯಸುತ್ತಿರಲಿಲ್ಲ.

"ಪಾಲ್, ನಿನಗಿಂದು ಲಂಚ್‌ಗೆ ಹಸಿವೆಯಿಲ್ಲದಿದ್ದರೆ ಡಿನ್ನರ್‌ಗೆ ಬರ್ತೀಯಲ್ವಾ?"

"ಕ್ಷಮಿಸಿ, ಎರಡು ದಿನಗಳಿಂದ ನನ್ನ ಹೊಟ್ಟೆ ಸರಿಯಿಲ್ಲ."

"ನೋಡು, ನಾವು ನೆರೆಹೊರೆಯವರು. ನಾವು ಉತ್ತಮ ಸಂಬಂಧವನ್ನಿಟ್ಟುಕೊಳ್ಳಬೇಕು. ಯಾವುದೇ ವೇಳೆಯಲ್ಲಾದರೂ ನಾವು ಒಬ್ಬರಿಗೊಬ್ಬರು ಉಪಯೋಗಕ್ಕೆ ಬರುತ್ತೇವೆ. ನೀನು ಡಿನ್ನರ್‌ಗೆ ಬರದಿದ್ದರೆ, ನಾವು ಸಿನಿಮಾ ನೋಡಿಕೊಂಡು ಬರೋಣ."

"ಆ ಸಿನಿಮಾ ಯಾವುದು?"

"ರಾತ್ ಕೀ ಬಾತ್." ಕೈಟಿ ಬಹುಶಃ ಕಣ್ಣು ಹೊಡೆದು ಹೇಳಿದ್ದಳು.

"ಆ ಸಿನಿಮಾದಲ್ಲಿ ಹೆಂಗಸೊಬ್ಬಳು ಗಿಳಿಯನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸುವಳೇ?"

"ಇಂಥ ಸಿನಿಮಾಗಳಲ್ಲಿ ಭಜನೆ–ಕೀರ್ತನೆ ನಡೆಯುವುದೇ? ನಿನ್ನೆದುರು ಮೂರ್ಖ ಸಹ ಬುದ್ಧಿವಂತನಾಗಿ ಕಾಣುತ್ತಾನೆ."

ನಾನು ಮಾತು ಮುಂದುವರೆಸಲು ಶಬ್ದಗಳನ್ನು ಹುಡುಕುತ್ತಿದ್ದೆ, ಆಗಲೇ ಅವಳ ಫೋನ್ ರಿಂಗಾಯಿತು. ಅವಳು ಒಳಗೆ ಹೋಗಿ, ಶೀಘ್ರವೇ ಹೊರಗೆ ಬಂದಿದ್ದಳು. ಅವಳು ನನ್ನ ಹೆಗಲ